FRESH MINOR IRRIGATION WORKS BE TAKEN UP IN HASSAN DISTRICT.

*Q.—551. SRI S. SIVAPPA (Shravanabelagola).—

Will the Government be pleased to state :—

(a) the number of fresh minor irrigation works ordered to be taken up during 1965-66 in Hassan District ;

(b) which are those works and where are they situated (Taluk-wise details may be furnished) ;

(c) the progress of those works up to the end of February 1966 ?

A.—SRI ALUR HANUMANTHAPPA (Deputy Minister for Minor Irrigation).—

(a) 7.
(b) *Vide* Statement appended.
(c) Just started.

STATEMENT

Fresh Minor Irrigation Works ordered to be taken up during 1965-66 in Hassan District.

Sl. No.	*Name of work*	*Amount of estimate*
	Arsikere Taluk	Rs.
1.	Ahobalarayanakere ..	1,00,000
2.	Thimmappanayakanakere ..	12,000†
3.	Nagavedi Samudrakere ..	20,000†
4.	Sanakere tank ..	**
5.	Doddanahallikere ..	**
	Holenarasipur Taluk	
6.	Construction of a new tank near Banakuppe.	80,000‡
7.	Increasing the capacity of Devaramuddana-hally Tank.	1,08,000§

Remarks—

†Approved by the Ministers.

‡Vide Government letter No. P.W.D. 140 HS 65, dated 31st January 1966.

§Recommended vide this office letter No. IPH/143/IGN (G)/62-63, dated 22nd February 1966.

**Note.—Estimate is still awaited from the Executive Engineer.

ಶ್ರೀ ಎಸ್. ಶಿವಪ್ಪ.—ಕೊಟ್ಟಿರಕ್ಕ ಉತ್ತರದಲ್ಲಿ ಹಾಸನ ಬಿಲ್ಲೆಯ ಅತಿ ದೊಡ್ಡ ತಾಲ್ಲೂಕಾದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಒಂದು ಕೆಲಸವನ್ನೂ ತೆಗೆದುಕೊಳ್ಳದೆ ಇರುವುದಕ್ಕೆ ಪ್ರಬಲವಾದ ಕಾರಣಗಳೇನು, ಸ್ಯಾಮಿ ?

† ಶ್ರೀ ಆಲೂರು ಹನುಮಂತಪ್ಪ.—ಹಾಸನ ಜಿಲ್ಲೆಯಲ್ಲಿ ಈಗಾಗಲೇ ಸ್ಪಿರ್ ಓವರ್ ಕಮಿಟೆಡ್ ವರ್ಕ್ಸ್ ಸುಮಾರು 57 ಲಕ್ಷ ರೂಪಾಯಿ ಕೆಲಸಕಾರ್ಯಗಳು ಇದ್ದುವು. ಅದಕ್ಕೋಸ್ಕರ ಸ್ಪಿರ್ ಓವರ್ ವರ್ಕ್ಸ್ ಬೇಗ ಮುಗಿಸಬೇಕು ಎನ್ನುವ ದೃಷ್ಟಿಯಿಂದ ಮತ್ತೆ ಕೆಲಸವನ್ನು ತೆಗೆದುಕೊಂಡಾಗ ಅದನ್ನು ಮಾಡಿ ಮುಗಿಸತಕ್ಕ ಜವಾಬ್ದಾರಿಯನ್ನು ಇಂಜಿನಿಯರುಗಳಿಗೆ ಹೊರಿಸಿದ್ದೇವೆ. ಮಾಡಿ ಮುಗಿಸುವ ಕೆಲಸಗಳೇ ಇರುವಾಗ ಹೊಸದಾಗಿ ತೆಗೆದುಕೊಂಡರೆ ಹೆವಿ ಡಿಮಾಂಡ್ ಆಗುತ್ತದೆ ಎನ್ನುವ ದೃಷ್ಟಿಯಿಂದ ಇಷ್ಟು ಕೆಲಸಗಳನ್ನು ಮಾತ್ರ ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸ್ಪಿರ್ ಓವರ್ ವರ್ಕ್ಸ್ ಇಲ್ಲ, ಎಲ್ಲ ಮುಗಿದಿವೆ. ಕೇವಲ ನಾಲ್ಕೈದು ಪರ್ಸೆಂಟ್ ಬಾಕಿ ಇರಬಹುದು. ಹೋದ ವರ್ಷ ಮಳೆ ಇಲ್ಲದೆ ಹಸಿರು ಹುಲ್ಲನ್ನು ಹೊಡ್ಯತಕ್ಕ ಕೆಲಸ ಉಳಿದು ಬಾಕಿ ಕೆಲಸವೆಲ್ಲ ಆಗಿದೆ. ಅದರೂ ಕೂಡ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಒಂದು ಕೆಲಸವನ್ನೂ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಚನ್ನರಾಯಪಟ್ಟಣಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಪ್ರಶ್ನೆಯನ್ನು ಹಾಕಿದರೆ ಹೇಳುತ್ತೇನೆ. ರೆಸ್ಟೋರೇಷನ್, ಬ್ರೀಚ್ ಫಿಲಿಂಗ್ ಕೆಲಸಕಾರ್ಯಗಳು ನಡೆಯುತ್ತಿವೆ. ಏರಿಗೆ ಹುಲ್ಲು ಹೊಡ್ಯತಕ್ಕ ಕೆಲಸ ನಿಂತಿದೆ ಎಂದು ಹೇಳಿದರು. ಅದನ್ನೂ ಮಾಡಿಸುತ್ತೇವೆ.

ಶ್ರೀ ಜಿ. ರಾಮೇ ಗೌಡ.—ಸ್ಪಿರ್ ಓವರ್ ವರ್ಕ್ಸ್ ಎಂದು ಮೂರು, ನಾಲ್ಕು, ಐದು ವರ್ಷ ಮುಂದುವರಿಸಿಕೊಂಡು ಹೋಗುವುದಕ್ಕೆ ಯಾರು ಕಾರಣ ? ಇದರ ನಿವಾರಣೆಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಮೊದಲೇ ಸಿರ್ಪ್ ಓವರ್ ವರ್ಕ್ಸ್‌ಗೆ ಎಷ್ಟು ಹಣವನ್ನು ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸದೆ ಇದ್ದುದು ಒಂದು ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಜೊತೆಗೆ ರೋಕರ್ ಕಂಟ್ರಾಕ್ಟರುಗಳು ಸ್ವಲ್ಪಮಟ್ಟಿಗೆ ಇದಕ್ಕೆ ಕಾರಣರಾಗುತ್ತಾರೆ. ಸೀನಿಯರ್ ಕಂಡಿಷನ್ಸ್ ಎಂದರೆ ಎಲ್ಲ ರೆಸ್ಟೋರೇಷನ್ ಕೆಲಸಕಾರ್ಯಗಳು ಆಗಬೇಕಾಗಿವೆ ಆ ಕೆಲಸಗಳನ್ನು ತೆಗೆದುಕೊಂಡಾಗ ಮುಂಗಾರು ಮಳೆ ಬಂದು ಕೆರೆ ತುಂಬಿದಾಗ ಕೆಲಸ ಕಾರ್ಯಗಳು ಅಷ್ಟು ಬೇಗ ಆಗುವುದಿಲ್ಲ. ಈ ಕಾರಣಗಳಿಂದ ಸ್ವಲ್ಪಮಟ್ಟಿಗೆ ತಡವಾದೀತು. ಇತ್ತೀಚೆಗೆ ಸರ್ಕಾರ ಇದನ್ನು ಮನವರಿಕೆ ಮಾಡಿಕೊಂಡು 16 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಈ ಐದು ವರ್ಷಗಳಲ್ಲಿ ಖರ್ಚು ಮಾಡಿ 25 ಕೋಟಿ ರೂಪಾಯಿ ಇದ್ದ ಸ್ಪಿರ್ ಓವರನ್ನು 10 ಕೋಟಿ ರೂಪಾಯಿಗೆ ಇಳಿಸಿದ್ದೇವೆ. ಇದಕ್ಕಾಗಿ ಮೊನ್ನೆ ನಾಲ್ಕೂವರೆ ಕೋಟಿ ರೂಪಾಯಿ ಕೆಲಸವನ್ನು ತೆಗೆದುಕೊಂಡಿದ್ದೇವೆ.

MR. SPEAKER.—This spill over is not constant or permanent. Factors do change. Some items are closed and new items are begun. That becomes spill over for the next year.

SRI G. RAME GOWDA.—It is only considering the spill over schemes that new estimates are sanctioned.

SRI VEERENDRA PATIL (Minister for Public Works).—So far as minor irrigation is concerned we have a very heavy spill over. The Executive Engineers have the power to sanction estimates costing 20 lakhs without higher officer's consent. They have sanctioned estimates without any reference to the grant they had received during the current year with the result we had spill over schemes to the extent of 20 crores. So, last year, *i.e.*, 1965-66 we have concentrated on completion of the work already started and we have programmed in such a way that there will be hardly very little spill over at the end of June 1967. If there are any it may be five or ten per cent. At the same time in view of the scarcity conditions in those places and looking to the condition of spill over we have taken steps to start new works.

ಶ್ರೀ ಎಚ್. ಡಿ. ದೇವೇಗೌಡ.—ಹಾಸನ ಜಿಲ್ಲೆಯಲ್ಲಿ ಮುಂಜೂರು ಮಾಡಿರತಕ್ಕ ಕೆಲಸ 3 ಲಕ್ಷ ರೂಪಾಯಿಗಳಷ್ಟು. ಅಲ್ಲಿ ಸ್ಪಿರೋವರ್ ವರ್ಕ್ಸ್ ಬಹಳ ಜಾಸ್ತಿ ಇರುವುದರಿಂದ ಅದಕ್ಕಾಗಿ ಹೆಚ್ಚಿಗೆ ಹಣವನ್ನು ಒದಗಿಸಬೇಕೆಂದು ಹೇಳುತ್ತಿದ್ದಾರೆ. 66-67ನೇ ಸಾಲಿಗೆ ಬೇರೆ ಬೇರೆ ಡಿವಿಜನ್ನುಗಳಲ್ಲಿ ಸ್ಪಿರ್ಲೋವರ್ ವರ್ಕ್ಸ್‌ಗಾಗಿ 20-30-40 ಲಕ್ಷ ರೂಪಾಯಿಗಳನ್ನು ಮುಂಜೂರು ಮಾಡಿರುವ ಕಾರಣ ಬೆಂಗಳೂರು ಡಿವಿಜನ್ನಿಗೆ ಮಾತ್ರ 20 ಲಕ್ಷ ರೂಪಾಯಿಗಳ ಕೆಲಸವನ್ನು ಮುಂಜೂರು ಮಾಡಿದ್ದಾರೆ. ಅದ್ದರಿಂದ ಅಲ್ಲಿಗೆ ಸ್ಪಿರ್ಲೋವರ್ ವರ್ಕ್ಸ್ ಬರುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಪಟ್ಟಿ ನೋಡುವುದರಿಂದ ಬಹಳಮಟ್ಟಿಗೆ ನಿಜವೆಂದನ್ನಿಸಬಹುದು. ಹಿರೇಕಟ್ಟುವಡ್ಡು ಯೋಜನೆಗೆ 15 ಲಕ್ಷ ರೂಪಾಯಿಗಳ ಮೇರೆಯೇ ಖರ್ಚಾಗುತ್ತದೆ, ಮೈನರ್ ಇರ್ರಿಗೇಷನ್ನಿಗೆ ಅಷ್ಟು ಖರ್ಚು ಬರುವುದಿಲ್ಲ. ವಿರೋಧಪಕ್ಷದ ನಾಯಕರು ಕೇಳುವುದು ಆ ರೀತಿಯಲ್ಲಿ ಸರಿಹೋಗುವುದಿಲ್ಲ. ಈಗಾಗಲೇ 18 ಅಥವಾ 20 ಲಕ್ಷ ರೂಪಾಯಿಗಳವರೆಗೆ ಹೊಸ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾಗಿದೆ. ಈಗ ಇನ್ನೂ ಸ್ವಲ್ಪ ಹಣವನ್ನೊದಗಿಸಿ ಹೆಚ್ಚು ಹೊಸ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಆ ಬಗ್ಗೆ ಚೀಫ್ ಇಂಜನಿಯರಿಗೆ ಹೇಳಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಸ್ಪಿರ್ಲೋವರ್ ಒಂದನ್ನೇ ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರದವರು ಕೆಲಸ ಮಾಡುತ್ತಿದ್ದರೂ ದೇಶದಲ್ಲಿ ಅಭಾವ ಪ್ರದೇಶಗಳು ಇದ್ದೇ ಇವೆ. ಉದಾಹರಣೆಗೆ ತುಮಕೂರಿನಲ್ಲಿ ಕೆಲವು ಕೆಲಸಗಳನ್ನು ಮಾಡಿದ್ದಾರೆ. ಈ ಸಭೆಯ ಸದಸ್ಯರುಗಳ ಅಭಿಪ್ರಾಯವನ್ನು ಕೂಡ ತೆಗೆದುಕೊಳ್ಳದೆ ಎಲ್ಲೆಲ್ಲಿ ಹೊಸ ಕೆರೆಗಳ ಕೆಲಸವಾಗಬೇಕೋ ಅಲ್ಲಿಗೆ ಹಣವನ್ನು ಮುಂಜೂರು ಮಾಡುತ್ತಾರೆ. ಅಥವಾ ಬರೀ ಚೀಟಿಗಳನ್ನು ಕೊಟ್ಟು ಚೀಫ್ ಇಂಜಿನಿಯರಿಗೆ ಒಂದು ಆದೇಶವನ್ನು ಕೊಡುತ್ತಾರೆ. ಚೀಟಿ ಮೇರೆ ಅನೇಕ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡುವುದರಿಂದ ಅಭಾವ ಪ್ರದೇಶಗಳು ಯಾವ ರೀತಿಯಲ್ಲಿ ಅಭಿವೃದ್ಧಿಯಾಗುತ್ತವೆ ?

ಶ್ರೀ ವೀರೇಂದ್ರ ಪಾಟೀರ್.—ಮಾನ್ಯ ಸದಸ್ಯರು ಏನು ಅಭಿಪ್ರಾಯ ಪಡುತ್ತಾರೋ ಅದರಲ್ಲಿ ಏನೂ ಸತ್ಯಾಂಶವಿಲ್ಲ. ನಾನು ಮತ್ತು ಆರ್ಥಿಕಮಂತ್ರಿಗಳು ಹೋಗಿ ಪ್ರತಿಯೊಬ್ಬ ಸದಸ್ಯರಲ್ಲಿಯೂ ಈ ವಿಚಾರವಾಗಿ ಚರ್ಚೆ ಮಾಡಿ ಆಫೀಸರ್ ಮತ್ತು ನಾನ್-ಆಫೀಸರ್‌ರೊಡನೆಯೂ ಚರ್ಚೆ ಮಾಡಿದ್ದೇವೆ. ಎಲ್ಲೆಲ್ಲಿ ಸ್ಪಿರ್ಲೋವರ್ ವರ್ಕ್ಸ್ ಇವೆಯೋ ಅಲ್ಲಲ್ಲಿ ಹೊಸ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ. ತುಮಕೂರಿಗೆ ಸಂಬಂಧಪಟ್ಟ ಒಂದೇ ಪಟ್ಟಿಯನ್ನು ತೆಗೆದುಕೊಂಡು ನೋಡಿದರೆ ಸರಿಹೋಗುವುದಿಲ್ಲ. ವಿರೋಧಪಕ್ಷದ ಸದಸ್ಯರು ಇರುವ ಕ್ಷೇತ್ರಗಳಲ್ಲಿ ಹೆಚ್ಚು ಕೆಲಸ ಕಾರ್ಯಗಳಾಗಿ ವಿರೋಧಪಕ್ಷದವರಲ್ಲದ ಸದಸ್ಯರಿಗೆ ಹೆಚ್ಚು ಉಪಕಾರಮಾಡಬೇಕೆಂದೇನೂ ಇಲ್ಲ. ರಾಜ್ಯಾಂಗಬದ್ಧವಾಗಿ ವಿರೋಧಪಕ್ಷದವರಿಗೆ ಹೆಚ್ಚು ಅನುಕೂಲವಾಗಿದೆ. ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಥಮದಲ್ಲಿ ಸ್ಪಿರ್ಲೋವರ್ ವರ್ಕ್ಸ್ ಎಷ್ಟಿದೆ, ಹೊಸ ಕೆಲಸಗಳನ್ನು ಮಾಡುವುದಕ್ಕೆ ಸ್ಕೋಪ್ ಎಷ್ಟಿದೆ, ಅಭಾವ ಪರಿಸ್ಥಿತಿ ಎಲ್ಲೆಲ್ಲಿದೆ—ಈ ಅಂಶಗಳನ್ನೆಲ್ಲಾ ಪರಿಶೀಲಿಸಿ ಎಲ್ಲಾ ಕಡೆಗಳೆಂದಲೂ ವರದಿ ಮಾಡಬೇಕೆಂದು ಚೀಫ್ ಇಂಜನಿಯರಿಗೆ ನೂಚನೆ ಕೊಟ್ಟಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಸನ ಜಿಲ್ಲೆಯಲ್ಲಿ ವಿರೋಧಪಕ್ಷದ ಸದಸ್ಯರಿರುವ ಹೊಳೇ ನರಸೀಪುರ ಮತ್ತು ಅರಸೀಕೆರೆಗಳಲ್ಲಿ ಚಿಕ್ಕ ಚಿಕ್ಕ ಕೆರೆಗಳನ್ನು ನಿರ್ಮಾಣ ಮಾಡಲು ತಕ್ಕ ಕ್ರಮವನ್ನು ತೆಗೆದುಕೊಂಡಿದ್ದಾರೆ. ಮೈನರ್ ಇರ್ರಿಗೇಷನ್ನಿಗೆ ಹೆಚ್ಚಿಗೆ ಸ್ಕೋಪ್ ಇರತಕ್ಕ ಮಲೆನಾಡು ಪ್ರದೇಶ ಹಾಸನ ಜಿಲ್ಲೆಯಲ್ಲಿರುವುದರಿಂದ ಹಾಸನ ಜಿಲ್ಲೆಯ ತಾಲ್ಲೂಕುಗಳಿಗೆ ಒಂದು ಮೈನರ್ ಇರ್ರಿಗೇಷನ್ ಕೆಲಸವನ್ನು ಕೊಡದೇ ಇರಲು ಕಾರಣವೇನು ?

ಶ್ರೀ ವೀರೇಂದ್ರಪಾಟೀರ್.—ಮಾನ್ಯ ಸದಸ್ಯರು ಹಾಸನ ಜಿಲ್ಲೆ ಒಂದೇ ನೋಡಿದರೆ ಸಾಲದು. ಅಲ್ಲಿ ಮಾತ್ರ ಅವರು ಹೇಳಿದ್ದರಲ್ಲಿ ಬಹುಶಃ ಬಹಳ ಮಟ್ಟಿಗೆ ನಿಜವಿರಬಹುದು. ಈ ವಿಚಾರವಾಗಿ ವಿರೋಧಪಕ್ಷ ಅಥವಾ ಆಡಳಿತ ಪಕ್ಷ—ಇವುಗಳನ್ನು ಮುಂದೆ ಇಟ್ಟುಕೊಂಡು ನಿರ್ಣಯ ಮಾಡಲಲ್ಲ.

ಶ್ರೀ ಎಸ್. ಶಿವಪ್ಪ.—ಹೆಚ್ಚಿನ ಸಂಖ್ಯೆಯಲ್ಲಿ ಮೈನರ್ ಇರ್ರಿಗೇಷನ್ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಚೀಫ್ ಇಂಜನಿಯರಿಗೆ ಹೇಳುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದರು. ಶಾಸನ ಸಭಾಸದಸ್ಯರು, ಚೀಫ್ ಇಂಜನಿಯರು, ಅಥವಾ ಮಂತ್ರಿಗಳ ಮುಂದೆ ಅರ್ಜಿದಾರರ ಪರವಾಗಿ ನಿಂತು ಪತ್ರ ಮುಖಾಂತರ ವ್ಯವಹಾರ ನಡೆಸಿದ್ದರೆ ಅವರ ಅರ್ಜಿಗಳನ್ನು ಪೆರಿಟ್ ಮೇರೆ ತೆಗೆದುಕೊಂಡು ಶೀಘ್ರವಾಗಿ ಆ ಕೆಲಸಗಳನ್ನು ಮಾಡರಾಗುತ್ತದೆಂದು ಭರವಸೆಯನ್ನು ಕೊಡುತ್ತಾರೆಯೇ ?

—ಮಾಡುವ ಹಾಗೆ ಇದೆ. ಆದ್ದರಿಂದ ಈ ವರ್ಕ್ ಆ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದೆಂದು ನನಗನ್ನಿಸುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ವಿರೋಧ ಪಕ್ಷದ ನಾಯಕರು ಚೀಫ್ ಇಂಜನಿಯರ್ ಅಥವಾ ನನ್ನ ಹತ್ತಿರ ಬಂದು ಆ ವಿಷಯಗಳನ್ನು ಹೇಳಲಿ. ಎರಡನೆಯ ವಿಚಾರವಾಗಿ ನೋಡಿದರೆ ಹೋದ ವರ್ಷ ತೆಗೆದುಕೊಂಡಂಥ ಕಾರ್ಯಗಳು ಅಷ್ಟುಮುಟ್ಟಿಗೆ ಹೆಚ್ಚಲ್ಲ. ಆ ಒಂದು ದೃಷ್ಟಿಯಿಂದ ಈ ವರ್ಷ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಆದೇಶವನ್ನು ನೀಡಿದ್ದೇವೆ.

STATE HIGHWAYS AND STATE FUND ROADS UNDER THE CONTROL OF P.W.D.

*Q.—321.—Sri G. RAME GOWDA (Doddaballapur).—

Will the Government be pleased to state :—

(*a*) the length of State Highways, State Fund Roads, and old District Board Roads under the control of the P.W.D. in Doddaballapur Taluk (separate figures in each case may be given) ;

(*b*) the asphalted mileage in each case ;

(*c*) when the full lengths in each would be asphalted ?

A.—Sri VEERENDRA PATIL (Minister for Public Works).—

		M	*F*
(*a*) (i)	State Highways	..	30—0
(ii)	State Fund Roads	..	68—0
(iii)	Old District Board Roads	..	14—2
(*b*) (i)	State Highways	..	22—3
(ii)	State Fund Roads	..	36—1
(iii)	Old District Board Roads	..	Nil

(*c*) As and when funds become available.

ಶ್ರೀ ಜಿ. ರಾಮೇಗೌಡ.—ಪಕ್ಕದ ಎರ್ಲಾ ತಾಲ್ಲೂಕುಗಳಲ್ಲೂ ಅಲ್ಲಿರಕಕ್ಕ ರಸ್ತೆಗಳು ಆಸ್ ಫಾರ್ಟ್ ಆಗಿರುವಾಗ ಈ ತಾಲ್ಲೂಕಿನಲ್ಲಿ 55 ಮೈಲಿ ಇನ್ನೂ ಆಗದೇ ಇರುವುದಕ್ಕೆ ಕಾರಣಗಳೇನು ;

†ಶ್ರೀ ವೀರೇಂದ್ರ ಪಾಟೀಲ್.—ಆ ತಾಲ್ಲೂಕಿನಲ್ಲಿ ಕೆಲವು ಕಡೆಗಳಲ್ಲಿ ಆಸ್‌ಫಾರ್ಟ್ ಮಾಡಿದ್ದಾರೆ. ಸ್ಟೇಟ್ ಹೈವೇಸ್ 30 ಮೈಲಿ, ಸ್ಟೇಟ್ ಫಂಡ್ ರೋಡ್ಸ್ 68 ಮೈಲಿಗಳು, 55 ಮೈಲಿ 4 ಫರ್ಲಾಂಗ್ ರಸ್ತೆಯನ್ನು ಆಸ್‌ಫಾರ್ಟ್ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ಸ್ವಾತಂತ್ರ್ಯ ಬಂದು 18 ವರ್ಷಗಳಾದರೂ ಸರ್ಕಾರದ ಅಧೀನ ದಲ್ಲಿರತಕ್ಕ ರಸ್ತೆಗಳು ಆಸ್‌ಫಾರ್ಟ್ ಆಗದೇ ಇರುವುದು ಶೋಚನೀಯವಾಗಿದೆ. ಆದ್ದರಿಂದ ಅದನ್ನು ಈ ವರ್ಷ ಸರ್ಕಾರದವರು ಪೂರೈಸುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಸ್ವಾತಂತ್ರ್ಯ ಬಂದನಂತರ ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಲಿಲ್ಲವೆನ್ನುವುದು ನಿಜವಲ್ಲ. ರಸ್ತೆಗಳನ್ನು ಆಸ್‌ಫಾರ್ಟ್ ಮಾಡುವ ವಿಷಯದಲ್ಲಿ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಮಾನ್ಯ ಸದಸ್ಯರಿಗೆ ಬೇಕು ಎಂದರೆ ಅದರ ಮಾಹಿತಿ ಕೊಡುತ್ತೇನೆ. 1963-64, 1964-65 ಮತ್ತು 1965-66 ಹೀಗೆ ಈ ಮೂರು ವರ್ಷಗಳಲ್ಲಿಯೂ ಸುಮಾರು 14 ಮೈಲಿ 4 ಫರ್ಲಾಂಗ್ ದೂರದಷ್ಟು ರಸ್ತೆಗಳನ್ನು ಆಸ್‌ಫಾರ್ಟ್ ಮಾಡಿದ್ದಾರೆ. ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಸುಮಾರು 1,58,437 ರೂಪಾಯಿಗಳಷ್ಟು ಖರ್ಚುಮಾಡಿದ್ದಾರೆ. ಮೂರು ವರ್ಷಗಳಲ್ಲಿ ದೇಶಾದ್ಯಂತ 228 ಲಕ್ಷ ರೂಪಾಯಿಗಳನ್ನು ಆಸ್‌ಫಾಲ್ಟ್‌ಗಾಗಿ ಖರ್ಚುಮಾಡಬೇಕೆಂದಿದ್ದೇವೆ. ಈಗ ಅನೇಕ ತಾಲ್ಲೂಕುಗಳಲ್ಲಿ ಆಸ್‌ಫಾರ್ಟ್ ಕೆಲಸ ಆಗಿದೆ.

ಶ್ರೀ ಜಿ. ರಾಮೇಗೌಡ.—ಈ ಸಾಲಸರಾದರೂ ಅದನ್ನು ಪೂರೈಸಲಾಗುತ್ತದೆಂದು ಏನಾದರೂ ಭರವಸೆ ಕೊಡುತ್ತಾರೆಯೇ ?